ಅಮರಯ್ಯಾ ಪತ್ರಿಮಠ, ಸುರಪೂರ
*ತುಂಬಾ ಕೂಲ್ ಆಗಿರುವುದು ಹೇಗೆ?*



ದೊಡ್ಡ ಫ್ರಿಡ್ಜಿನ ಬಾಗಿಲು ತೆರೆಯಿರಿ, ಫ್ರೀಝರ್ ಒಳಗೆ ಸೇರಿರಿ. ಬಾಗಿಲು ಎಳೆದುಕೊಳ್ಳಿ.

ರತ್ನಜ, ಮೈಸೂರು
*ಮದುವೆ ಆದಮೇಲೆ ಪ್ರೀತಿ ಕಡಿಮೆ ಆಗುತ್ತದೆ ಎನ್ನುವರಲ್ಲಾ, ನಿಜವೆ?*
ಸುಳ್ಳು. ಇನ್ನೂ ಹೆಚ್ಚಾಗುತ್ತದೆ ಬೇರೆ ಹುಡುಗಿಯರ ಮೇಲೆ!

ಎಸ್.ಜಿ. ಕರನಂದಿ, ಹುನಗುಂದ
*ಕಾಸು ಕೊಡದೆ ಸಿಗುವ ವಸ್ತುಗಳು ಯಾವುವು?*
ಸಾಲ ನೀಡಿದ ಬ್ಯಾಂಕ್‌ನ ನೋಟೀಸ್‌ಗಳು, ಕೋರ್ಟ್ ಸಮನ್ಸ್, ಜಪ್ತಿ ವಾರಂಟ್, ಅರೆಸ್ಟ್ ವಾರಂಟ್....

ವಿ. ಹಮೀದ್, ವಿಟ್ಲ
ಮದುಮಗ ಮೊದಲ ರಾತ್ರಿಗೆ ತಯಾರಾಗುತ್ತಿದ್ದರೆ ಮದುಮಗಳು ವಾಟ್ಸ್‌ಆಪ್ ನೋಡುತ್ತಿದ್ದಾಳಲ್ಲಾ...?
ಅದಕ್ಕೂ ಚಿಂತೆಯೇ? ಮೋಡೆಮ್ ಆಫ್ ಮಾಡಿದರೆ ಮೇಡಮ್ ಇತ್ತ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಮದ್ಯಪಾನಕ್ಕೆ ಗುಂಡು, ಎಣ್ಣೆ ಎಂದೇಕೆ ಕರೆಯುತ್ತಾರೆ ರಾಂ?*




ಕುಡಿದಾಗ ಭೂಮಿ ಗುಂಡಗೆ ಸುತ್ತುವಂತೆನಿಸುವುದರಿಂದ ಗುಂಡು; ಮುಖ ಎಣ್ಣೆ ಬಳಿದ ಮಟ್ಟಕ್ಕೆ ಬೆವರುವುದರಿಂದ ಎಣ್ಣೆ.

ದೇವೇಂದ್ರ, ಕಡೂರು
*ಕವಿಗಳೇಕೆ ಗಂಡಸರನ್ನು ವರ್ಣಿಸುವುದಿಲ್ಲ?*
ವರ್ಣಿಸಿದ್ದಾರಲ್ಲ! ರಾಮಕೋಟಿ, ವಿಷ್ಣುಸಹಸ್ರನಾಮಗಳು ಗಂಡಿನ ವರ್ಣನೆಯೇ.

ಕೆ.ಎಂ. ವೀರೇಶ್, ಕೂಡ್ಲಿಗಿ
*ಸತ್ಯ ವಾಕ್ಯಕೆ ಹರಿಶ್ಚಂದ್ರನ ಹೆಸರು. ಮಿಥ್ಯವಾಕ್ಯಕೆ?*
worryಶ್ಚಂದ್ರನ ಹೆಸರು.

ಕೌಂಡಿನ್ಯ, ಬೆಂಗಳೂರು
*ನಾಯಿ ಹುಡುಕಿಕೊಟ್ಟವರಿಗೆ ಐದು ಸಾವಿರ ರೂಗಳ ಬಹುಮಾನ. ವಯೋವೃದ್ಧರು ಕಾಣೆಯಾದರೆ?*
ಹುಡುಕಿಕೊಟ್ಟವರಿಗೆ ಬೈದು ಸಾವಿರ ಅವಮಾನ.

ಎಚ್.ಆರ್. ದೇಸಾಯಿ, ರಾಯಚೂರು
*ಜ್ಞಾನಿ, ವಿಜ್ಞಾನಿ, ಅಜ್ಞಾನಿ ಒಂದೆಡೆ ಸೇರಿದರೆ ಯಾವ ವಿಷಯದ ಬಗ್ಗೆ ಚರ್ಚಿಸಬಹುದು?*
ಮೂವರಿಗೂ ಉತ್ತರ ದೊರಕದ ಏಕೈಕ ವಿಷಯ ಹೆಣ್ಣನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?

ಕುಮಾರ ಚಲವಾದಿ, ಹೊಳೆನರಸಿಪುರ
*ತರಕಾರಿ ತರೋಣ ಬರ್ತೀಯಾಂದ್ರೆ ತುಂಬಾ ಕೆಲಸವಿದೆ ಅನ್ನೋವ್ಳು ಸೀರೆ ಕೊಡಿಸ್ತೀನೀಂದ್ರೆ ತಕ್ಷಣ ರೆಡಿಯಾಗ್ತಾಳಲ್ಲಾ...?*
ಯಾವುದೇ ಚಾಲೂ ಆಗಬೇಕಾದ್ರೂ ಪಾಸ್‌ವರ್ಡ್ ಸರಿಯಿರಬೇಕು; 'ಸೀರೆ' ನಿಮ್ಮಾಕೆಯ ಚಲನೆಗೆ ಪಾಸ್‌ವರ್ಡ್.

ಕು.ಗೋ., ಉಡುಪಿ
*ತೆರಿಗೆಗಳ್ಳರು ದೇಶದ್ರೋಹಿಗಳಲ್ಲವೆ?*
ಉತ್ತರಕ್ಕೆ ಅವರ ಜಾತಿ, ಪಕ್ಷದ ವಿವರ ಬೇಕು. ಕೆಲವು ಜಾತಿ, ಪಕ್ಷದವರು ಏನು ಮಾಡಿದರೂ ದೇಶದ್ರೋಹವಲ್ಲ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
*ಉತ್ತರಭೂಪರಾದ ನಿಮ್ಮ ಮುಂದೆ ಯಕ್ಷ, ಕಿನ್ನರ, ಗಂಧರ್ವ, ದೇವತೆ, ರಾಕ್ಷಸ, ಅಪ್ಸರೆಯರನ್ನೆಲ್ಲ ತಂದು ನಿಲ್ಲಿಸಿ ಪ್ರಶ್ನೆ ಕೇಳಿಸಬೇಕೆಂದಿದ್ದೇನೆ. ಉತ್ತರಿಸುವಿರಾ?*
ಆಗದು. ದೇವರಾಕ್ಷಸರು ಕಿತ್ತಾಡತೊಡಗುವರು; ಯಕ್ಷ, ಕಿನ್ನರ, ಗಂಧರ್ವರು ಅಪ್ಸರೆಯರ ಬೆನ್ನು ಹತ್ತುವರು. ಕಡೆಗೆ ನೀವುನಾನೇ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಬದುಕು ಬಂಗಾರವಾಗಲು ಏನು ಮಾಡಬೇಕು?*
ಶ್ರಮದ ಗಣಿಯಿಂದ ಅನುಭವದ ಲೋಹವೆತ್ತಿ ವಿವೇಕವೆಂಬ ಚಿನಿವಾರನಲ್ಲಿ ರೂಪ ಪಡೆಯಬೇಕು.

## ಬಹುಮಾನಿತ ಪ್ರಶ್ನೆ

ಆರತಿ ಘಟಿಕಾರ್, ದುಬೈ
*ಫೇಸ್‌ಬುಕ್ ಮತ್ತು ಪಾಸ್‌ಬುಕ್ಕಿಗೆ ಇರುವ ವ್ಯತ್ಯಾಸವೇನು?*
ಪಾಸ್‌ಬುಕ್ಕಿನಲ್ಲಿ ಮಿನಿಮಮ್ ಬ್ಯಾಲೆನ್ಸಾದರೂ ಇರುತ್ತದೆ. ಫೇಸ್‌ಬುಕ್‌ನಲ್ಲಿ ಸಂಪೂರ್ಣ ಬ್ಯಾಲೆನ್ಸ್ ಕಳೆದುಕೊಂಡವರೂ ಇರುತ್ತಾರೆ.

ಮೇಘನಾ ನಿರಂಜಿ, ಹೆಬ್ಬಳ್ಳಿ
*ಭಾರತದ ಯುವಶಕ್ತಿ ಮುದುಕರಾಗುವ ಮುನ್ನ ಕೆಲಸ ಕೊಡುವ ಸರ್ಕಾರಗಳು ಯಾವಾಗ ಬರುತ್ತವೆ?*
ಸರ್ಕಾರಕ್ಕೇಕೆ ಕಾಯಬೇಕು? ಮಲ್ಯನಂತಾಗಿ; ಸಫಲವಾದರೂ ಕೆಲವರಿಗೆ ಕೆಲಸ, ವಿಫಲವಾದರೂ ಹಲವರಿಗೆ ಕೆಲಸ ಕೊಡಬಹುದು!

ಶಿವಮೊಗ್ಗ ರಮೇಶ್, ಮೈಸೂರು
*ರಾಜಕಾರಣಿಗಳ, ನಟರ ಫ್ಲೆಕ್ಸ್‌ಗಳಿಗೆ ಅಭಿಮಾನಿಗಳು ನೂರಾರು ಲೀಟರ್ ಹಾಲಿನ ಅಭಿಷೇಕ ಮಾಡಿ ಸಾಧಿಸುವುದೇನು?*



ಅಂದಿನ ಅಲ್ಲಿನ ಬೀದಿನಾಯಿಗಳು, ಬೆಕ್ಕುಗಳಿಗೆ ಕ್ಷೀರಭಾಗ್ಯ ನೀಡಿದ ಪುಣ್ಯ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಕೆರೆಯ ನೀರನ್ನು ಹೊರಕ್ಕೆ ಚೆಲ್ಲಿ ಅಪಾರ್ಟ್‌ಮೆಂಟ್ ಕಟ್ಟುವ ರಿಯಲ್ ಎಸ್ಟೇಟ್‌ನವರನ್ನು ಏನೆನ್ನಬೇಕು?*
ನಿರ್ನಾಮ್ ಬಿಲ್ಡರ್ಸ್.

ಎಂ.ಎ. ಕುಮಾರ್, ಬೆಂಗಳೂರು
*ಶಿವ ಅಭಿಷೇಕಪ್ರಿಯ; ವಿಷ್ಣು ಅಲಂಕಾರಪ್ರಿಯ. ಬ್ರಹ್ಮ?*
ತೊಗಲುಬೊಂಬೆ ಆಟ ಪ್ರಿಯ.

ಎಂ.ಕೆ. ರಾಜೇಶ್, ಚಾಮರಾಜನಗರ
*ನಿಜವಾದ ಬೇಡಿಗೂ, ಸಂಸಾರದ ಬೇಡಿಗೂ ಏನು ವ್ಯತ್ಯಾಸ?*
ಒಂದು ಕಾರಾಗೃಹಕ್ಕೆ ದಾರಿ; ಮತ್ತೊಂದು ಗೃಹದಲ್ಲೇ ಖಾರಕ್ಕೆ ದಾರಿ.

■ ರಾಮ್